www.ecourtsindia.com



ಸಾಕ್ಷಿಯನ್ನು ದಿಃ **25.01.2021** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 1 ನೇ ಎದುರುದರ ಪರ ಶ್ರೀ ಕೆ ಎಂ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ದಿಃ24.10.2015 ರಂದು ನನ್ನ ಮಗ ಸುರೇಶ್ ಸೂಗೂರು ಗ್ರಾಮದಲ್ಲಿ ದಸರಾ ಹಬ್ಬಕ್ಕೆ ಹೋಗಿದ್ದ. ಆತ ದಸರಾ ಹಬ್ಬ ಆಚರಣೆಗೆ ಹೋಗಿದ್ದ ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಮಗ ದಸರಾ ಹಬ್ಬ ಆಚರಣೆಗೆ ಹೋಗಿದ್ದ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ ನನ್ನ ಮಗ ಸವಾರಿ ಮಾಡುತ್ತಿದ್ದ ದ್ವಿಚಕ್ರವಾಹನದ ಸಂಖ್ಯೆ ನನಗೆ ಗೊತ್ತಿಲ್ಲ .ಆ ದ್ವಿಚಕ್ರ ವಾಹನದ ಇಂಜಿನ್ ಸಂಖ್ಯೆ ಹಾಗೂ ಚಾಸ್ಸಿ ಸಂಖ್ಯೆ ನನಗೆ ಗೊತ್ತಿಲ್ಲ.

ನನ್ನ ಮಗನಿಗೆ ಅಪಘಾತವಾಗಿದ್ದನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತ ಯಾವ ಯಾವ ವಾಹನಗಳ ಮಧ್ಯೆ ಸಂಭವಿಸಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ಮಗ ಸವಾರಿ ಮಾಡುತ್ತಿದ್ದ ದ್ವಿಚಕ್ರವಾಹನ ಹಾಗೂ ಇನ್ನೊಂದು ದ್ವಿಚಕ್ರವಾಹನದ ನಡುವೆ ಸಂಭವಿಸಿದೆ ಎಂದು ಉತ್ತರಿಸುತ್ತಾರೆ. ಆ ಅಪಘಾತದಲ್ಲಿ ಮೂರು ದ್ವಿಚಕ್ರವಾಹನಗಳು ಜಖಂಗೊಡಿವೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಯಾವ ಯಾವ ವಾಹನಕ್ಕೆ ಎಲ್ಲೆಲ್ಲಿ ಜಖಂ ಆಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ.

ನನ್ನ ಮಗನನ್ನು ಧರ್ಮಪುರದಿಂದ ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ಆಂಬ್ಯುಲೆನ್ಸ್ ನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಆತ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ ಎಂದು ನಾನು ಹೇಳಿದ್ದು, ಆತ ಯಾವ ಸ್ಥಳದಲ್ಲಿ ಮೃತಪಟ್ಟ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನನ್ನ ಮಗನ ಶವವನ್ನು ನಮ್ಮಗ್ರಾಮಕ್ಕೆ ಸಾಗಿಸಲು ಬಾಡಿಗೆ ವಾಹನಕ್ಕೆ ರೂ.30 ಸಾವಿರ ಬಾಡಿಗೆ ನಿಗಧಿಯಾಗಿತ್ತು. ಯಾವುದೇ

This is a True Copy of the Court Records Online. Authenticated @ districts.ecourtsindia.com/cnr/KACD310015782016/truecopy/order-4.pdf

ವಾಹನವನ್ನು ಬಾಡಿಗೆಗೆ ಪಡೆಯುವಾಗ ಪ್ರತಿ ಕಿ.ಮೀ ಗೆ ಇಂತಿಷ್ಟು ಮೊತ್ತ ಎಂದು ಬಾಡಿಗೆ ನಿಗಧಿಯಾಗುತ್ತದೆ ಎಂದರೆ ಸರಿ. ಬಾಡಿಗೆ ವಾಹನದ ಮಾಲೀಕನಿಗೆ ನಾವು ರೂ.25 ಸಾವಿರ ಹಣಕೊಟ್ಟಿದ್ದೇವೆ. ನನ್ನ ಮಗನ ಅಂತ್ಯಸಂಸ್ಕಾರಕ್ಕೆ ಹಾಗೂ ತಿಥಿ ಕಾರ್ಯಕ್ಕೆ ರೂ.2 ಲಕ್ಷ ಹಣ ಖರ್ಚಾಗಿದೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗ ಓ ಇ ಓ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಇ ಓ ಕಂಪನಿಗೆ ನನ್ನ ಮಗ ಕೆಲಸಕ್ಕೆ ಸೇರಿ ಆತ ಮೃತಪಡುವ ಕಾಲಕ್ಕೆ 3 ತಿಂಗಳಾಗಿತ್ತು. ಓ ಇ ಓ ಕಂಪನಿ ಅಸ್ತಿತ್ವದಲ್ಲಿಯೇ ಇಲ್ಲ ಎಂದರೆ ಸಾಕ್ಷಿ ಅದು ತನಗೆ ಹೇಳಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮಗ ಓ ಇ ಓ ಕಂಪನಿಯಿಂದ ಸಂಬಳ ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಐ ಟಿ ಐ ಮಾಡಿದ್ದ. ನನ್ನ ಮಗ ಐ ಟಿ ಐ ವ್ಯಾಸಂಗ ಮಾಡಿದ್ದ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ ನನ್ನ ಮೃತ ಮಗ ಆತನ ಸಂಬಳವನ್ನು ನಮಗೆ ತಂದುಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಮಗೆ ಜಮೀನು ಇದೆ ಎಂದರೆ ಸರಿಯಲ್ಲ. ನಮ್ಮ ಅರ್ಜಿಯಲ್ಲಿ ನನ್ನ ಉದ್ಯೋಗವನ್ನು ವ್ಯವಸಾಯ ಎಂದು ನಮೂದಿಸಿದ್ದೇವೆ ಎಂದರೆ ಸರಿ. ನನಗೆ ಜಮೀನು ಇದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಜಮೀನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಇರುವ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದುದ್ದರಿಂದ ನಮಗೆ ಆದಾಯ ಬರುತ್ತಿದ್ದು, ಅದರಿಂದಲೇ ನಾವು ಜೀವನ ನಿರ್ವಹಣೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಹೆಂಡತಿ ಅಂದರೆ 1 ನೇ ಅರ್ಜಿದಾರಳು ನನ್ನ ಆದಾಯದಿಂದಲೇ ಜೀವನ ನಿರ್ವಹಣೆ ಮಾಡುತ್ತಿದ್ದಳು ಎಂದರೆ ಸರಿ. ನಾನು ಹಾಗೂ ನನ್ನ ಮಗ ಅಂದರೆ 4 ನೇ ಅರ್ಜಿದಾರ ನಮ್ಮ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. 4 ನೇ ಅರ್ಜಿದಾರ ಪ್ರಾಪ್ತ ವಯಸ್ಕನಾಗಿದ್ದು ಆತ ಜಮೀನಿನಲ್ಲಿ ದುಡಿದು ತನ್ನ ಜೀವನ

This is a True Copy of the Court Records Online. Authenticated @ districts.ecourtsindia.com/cnr/KACD310015782016/truecopy/order-4.pdf

ನಿರ್ವಹಣೆ ಮಾಡುತ್ತಾನೆ ಎಂದರೆ ಸರಿಯಲ್ಲ.

ನನ್ನ ಮಗಳು ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದು, ತನ್ನ ಗಂಡನ ಆದಾಯದಿಂದ ಜೀವನ ನಿರ್ವಹಣೆ ಮಾಡುತ್ತಿದ್ದಾಳೆ ಎಂದರೆ ಸಾಕ್ಷಿ ಈ ಬಗ್ಗೆ ತಾನು ಹೇಳುವುದಿಲ್ಲ ಎಂದು ಉತ್ತರಿಸುತ್ತಾರೆ. ನಾವು ಅರ್ಜಿದಾರರು ಮೃತ ಸುರೇಶನ ಸಂಬಳದ ಮೇಲೆ ಅವಲಂಭಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ನನ್ನ ಮೃತ ಮಗನ ಅಂತ್ಯ ಸಂಸ್ಕಾರಕ್ಕೆ ಹಾಗೂ ತಿಥಿ ಕಾರ್ಯಕ್ಕೆ ರೂ. 2 ಲಕ್ಷ ಹಣ ಖರ್ಚು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಎ-16-ಇಸಿ-1154 ರ ದ್ವಿಚಕ್ರವಾಹನ ನನ್ನ ಮಗನ ದ್ವಿಚಕ್ರವಾಹನದ ಹಿಂಭಾಗದಿಂದ ಬಂದು ಆತನ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ಮಗನ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದ ದ್ವಿಚಕ್ರವಾಹನ ಮುಂದೆ ಹೋಗಿ ಕೆಎ-16-ಆರ್-3495 ರ ದ್ವಿಚಕ್ರ ವಾಹನಕ್ಕೂ ಡಿಕ್ಕಿ ಪಡಿಸಿದೆ ಎಂದು ಹೇಳಿದ್ದು ಇದು ಅಸಾಧ್ಯ ಎಂದರೆ ಸರಿಯಲ್ಲ.

ಆ ದಿನ ನನ್ನ ಮಗ ಚಾಲನೆ ಮಾಡುತ್ತಿದ್ದ ದ್ವಿಚಕ್ರವಾಹನಕ್ಕೂ ಕೆಎ-16-ಆರ್-3495 ರ ದ್ವಿಚಕ್ರ ವಾಹನಕ್ಕೂ ಅಪಘಾತವಾದಗಿದೆ ಎಂದರೆ ಸರಿಯಲ್ಲ ಕೆಎ-16-ಇಸಿ-1154 ರ ದ್ವಿಚಕ್ರವಾಹನ ಹಾಗೂ ಅದರ ಚಾಲಕ ದಿಃ24.10.2015 ರಂದು ಸಂಭವಿಸಿದ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ನಾವು ಅರ್ಜಿದಾರರು , ಪೊಲೀಸರು ಹಾಗೂ ಕೆಎ-16-ಆರ್-3495 ರ ಮಾಲೀಕ ಸೇರಿ ಈ ಪ್ರಕರಣವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ 1 ನೇ ಎದುರುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).
ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.

This is a True Copy of the Court Records Online. Authenticated @ districts.ecourtsindia.com/cnr/KACD310015782016/truecopy/order-4.pdf